ಮುಂದುವರೆದ ಪಾಟೀ ಸವಾಲು ಶ್ರೀ.ಎ ಕೆ ಜಿ  ಪ್ರತಿವಾದಿಯರ ಪರ ವಕೀಲರಿಂದ

ಸಾಕ್ಷಿಗೆ ದಿನಾಂಕ **25.09.2019** ರಂದು ಪ್ರಮಾಣ ವ **cause** ಚನ ಬೋಧಿಸಲಾಯಿತು.

1. ಸಾಮಾನ್ಯವಾಗಿ ಮನೆ ಕಟ್ಟಡ ಕಟ್ಟುವಾಗ ಅಡಿಪಾಯದ ನಕಾಶೆ(Line out) ಹಾಕುತ್ತಾರೆ ಎಂದರೆ ಸರಿ. ನಕಾಶೆ(Line out)ನ್ನು ಅಳತೆ ಪ್ರಕಾರ ಹಾಕುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹಳೆಯ ಕಟ್ಟಡ ಕಟ್ಟುವಾಗ ಹಾಕುವುದಿಲ್ಲ ಹೊಸ ಕಟ್ಟಡ ಕಟ್ಟುವಾಗ ಹಾಕುತ್ತೇವೆ ಎಂದು ನುಡಿಯುವರು. ವಾದಿಯ ಮನೆ ಕೆಲಸವನ್ನು ನಕಾಶೆ(Line out)ಹಾಕಿ ಕಟ್ಟಿದ್ದೇವೆ. ಸದರಿ ನಕಾಶೆ(Line out)ನ್ನು ಹಾಕಿರುವ ಬಗ್ಗೆ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನಕಾಶೆ(Line out)ನ್ನು ಹಾಕುವಾಗ ವಾದಿ ಜಾಗದ ಪೂರ್ವ-ಪಶ್ಚಿಮ ಮತ್ತು ಉತ್ತರ-ದಕ್ಷಿಣ ಅಳತೆ ಮಾಡಿದ್ದೇನೆ ಆದರೆ ಈಗ ನನಗೆ ನೆನಪಿಲ್ಲ. ಸಾಮಾನ್ಯವಾಗಿ ಅಳತೆ ಮಾಡುವ ಕಾಲಕ್ಕೆ ಆಸ್ತಿಯ ದಾಖಲಾತಿ ನೋಡಿ ಅಳತೆ ಮಾಡುತ್ತಿರೋ ಅಥವಾ ಮಾಲೀಕರು ಹೇಳಿದಂತೆ ಅಳತೆ ಮಾಡುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿಯು ಮಾಲೀಕರು ಹೇಳಿದಂತೆ ಕಟ್ಟಡ ಕಟ್ಟುತ್ತೇವೆಂದು ನುಡಿಯುವರು. ಹೀಗೆ ಯಾವ ದಿನಾಂಕ, ವರ್ಷ, ತಿಂಗಳಿನಲ್ಲಿ ಅಳತೆ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸುಮಾರು 7 ರಿಂದ 8 ವರ್ಷಗಳ ಹಿಂದೆ ಅಳತೆ ಮಾಡಿದ್ದೇವೆ ಎಂದು ನುಡಿಯುವರು.ಈ ಕುರಿತು ನನ್ನ ಸಾಕ್ಷ್ಯ ಪ್ರ cause ಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ಅಳತೆ ಮಾಡುವ ಕಾಲಕ್ಕೆ 1 ನೇ ಪ್ರತಿವಾದಿಯು ಕೂಡಾ ಹಾಜರಿದ್ದರು. ಸದರಿಯವರು ಒಮ್ಮೆ ತಕರಾರು ಮಾಡಿದ್ದರು. ಈ ಕುರಿತು ನಾನು ತಕರಾರನ್ನು ಬಗೆಹರಿಸಿಕೊಳ್ಳುವಂತೆ ವಾದಿ ಮತ್ತು ಪ್ರತಿವಾದಿಯರಿಗೆ ಹೇಳಿದ್ದೆ ಮತ್ತು ತಕರಾರು ಮುಗಿದ ನಂತರ ನಾನು ಕಟ್ಟಡ ಕಟ್ಟಿಕೊಡುತ್ತೇನೆ ಎಂದು ಹೇಳಿದ್ದೆ. ತಕರಾರು ಯಾವ ವಿಷಯಕ್ಕೆ ಆಗಿತ್ತು ಎಂದು ನನಗೆ ಗೊತ್ತಿಲ್ಲ.

2. ಸಾಮಾನ್ಯವಾಗಿ ಆಸ್ತಿಯ ಅಳತೆಯ ಬಗ್ಗೆ ತಕರಾರು ಬಂದಾಗ ದಾಖಲಾತಿಗಳನ್ನು ನೋಡಿ ಬಗೆಹರಿಸುಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಗಳ ಖರೀದಿ ಪತ್ರ ಇದ್ದ ಬಗ್ಗೆ ನನಗೆ ಗೂತ್ತಿಲ್ಲ. 1 ನೇ ಪ್ರತಿವಾದಿಯು ಆಸ್ತಿಗಳ ಖರೀದಿ ಪತ್ರದ ಅಳತೆ ಪ್ರಕಾರ ನಕಾಶೆ(Line out) ನ್ನು ಹಾಕುವಂತೆ ತಕರಾರು ಮಾಡಿದಾಗ ನಾನು ಇದ್ದೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ಅತಿಕ್ರಮಣ ಮಾಡಿ ಕಟ್ಟಡ ಕಟ್ಟುವ ಬಗ್ಗೆ ತಕರಾರು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನಕಾಶೆ(Line out)ನ್ನು ಹಾಕುವಾಗ ಅತಿಕ್ರಮಣ ಮಾಡಿ ಕಟ್ಟಡ ಕಟ್ಟುವ ಕುರಿತು ತಕರಾರು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಡುವಿನ ಗೋಡೆಗೆ ಮಾತ್ರ ತಕರಾರು ಬಂದಿತ್ತು ಎಂದು ನುಡಿಯುವರು.

3. ಸಾಮಾನ್ಯವಾಗಿ ಆಸ್ತಿಗಳ ಖರೀದಿ ಪತ್ರಗಳ ಅಳತೆ ಪ್ರಕಾರವಾಗಿ ಕಟ್ಟಡ ಕಟ್ಟುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿಯ ಮನೆಯ ಕಟ್ಟಡವನ್ನು ಹಳೆ ಕಟ್ಟಡದ ಮೇಲೆಯೇ ಕಟ್ಟಿದ್ದೇವೆ ಎಂದು ನುಡಿಯುವರು. ವಾದಿಯು ದಾವಾ ಹೂಡುವ ಕಾಲಕ್ಕೆ ನಾನು ಬಂದಿರಲಿಲ್ಲ. ವಾದಿಯು ತನ್ನ ಹಳೆಯ ಕಟ್ಟಡದ ಮೇಲೆ ಮುಂದುವರೆದು ಕಟ್ಟಡ ಕಟ್ಟಿಸಿದ್ದಾರೆ ಎಂದು ವಾದ ಪತ್ರದಲ್ಲಿ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯ ಜಾಗದಲ್ಲಿ ಹಳೆಯ ಅಡಿಪಾಯ ಇತ್ತು ಎಂದು ತೋರಿಸಲು ನಾನು ದಾಖಲಾತಿಯನ್ನು ಹಾಜರು ಮಾಡಿಲ್ಲ. ಸಾಕ್ಷಿಯು ಮುಂದುವರೆದು ಹಳೆ ಕಟ್ಟಡ ತೆರವುಗೊಳಿಸಿ ಅಲ್ಲಿಯೇ ಕಟ್ಟಡ ಕಟ್ಟಿದ್ದೇನೆ ಎಂದು ನುಡಿಯುವರು. ಈ ಕುರಿತು ಹಳೆ ಕಟ್ಟಡ ತೆರೆವುಗೊಳಿಸಿದ ಬಗ್ಗೆ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಸದರಿ ಹಳೆ ಕಟ್ಟಡವನ್ನು ನೀವೇ ತೆರೆವುಗೊಳಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹಳೆ ಬಿದ್ದುಹೋದ ಗೋಡೆ ಇತ್ತು ಎಂದು ನುಡಿಯುವರು.

4. 1 ನೇ ಪ್ರತಿವಾದಿಯ ಆಸ್ತಿಯ ಖರೀದಿ ಪತ್ರದ ಅಳತೆ ಪ್ರಕಾರ ಮನೆ ಕಟ್ಟಿಕೊಳ್ಳುವ ವಿಚಾರದ ಸಲುವಾಗಿ ವಾದಿಯೊಂದಿಗೆ ತಕರಾರು ಬಂದಿತ್ತು

ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಆಸ್ತಿಗಳನ್ನು ಅಳತೆ ಮಾಡಿಸಿಕೊಳ್ಳುವಂತೆ ವಾದಿಗೆ ಹೇಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಖರೀದಿ ಪತ್ರಗಳ ಆಧಾರದ ಮೇಲೆ ಆಸ್ತಿಗಳ ಅಳತೆ ಗೊತ್ತಾಗುತ್ತದೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರೊಂದಿಗೆ ಆಸ್ತಿಗಳ ಅಳತೆಗೆ ಸಂಬಂಧಿಸಿದಂತೆ 2 ರಿಂದ 3 ಬಾರಿ ನನ್ನ ಸಮಕ್ಷಮ ಜಗಳವಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

5. ಹಳೆ ಗೊಡೆಯ ಮೇಲೆ ಹೊಸ ಗೋಡೆಯ cause ನ್ನು ಕಟ್ಟಲಾಗಿದೆ ಎಂದು ಹೇಳಲಾದ ಹಳೆ ಗೋಡೆಯನ್ನು ಯಾರು ಕಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಗೊಡೆಯನ್ನು ಎಷ್ಟು ವರ್ಷಗಳ ಹಿಂದೆ ಕಟ್ಟಿದ್ದರು ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಬಸವನ ಬಾಗೇವಾಡಿ.

**<u>Cross examination by Sri.       Counsel for the Defendant.</u>**